ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿಸಿ. ಸಂಖ್ಯೆ: 61/2023</u>**

ಪ್ರ.ವ.ಬೋ.ತಾಃ 24-02-2026

ಚಾಸಾಃ 5 ಫ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಮಂಜುನಾಥ್ |
| ತಂದೆ/ಗಂಡನ ಹೆಸರು | ಪ್ರಕಾಶ್ |
| ವಯಸ್ಸು | 32 ವರ್ಷ |
| ವೃತ್ತಿ | ಮಲೇರಿಯಾ ಮೇಲ್ವಿಚಾರಕರು,<br>ತಾಲ್ಲೂಕು ಆರೋಗ್ಯ ಕೇಂದ್ರ,<br>ಮಧುಗಿರಿ |
| ವಾಸ | ಮಧುಗಿರಿ ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ನಾನು 2021 ರಿಂದ ಇಲ್ಲಿಯವರೆಗೆ ಮಲೇರಿಯಾ ಮೇಲ್ವಿಚಾರಕರಾಗಿ ತಾಲ್ಲೂಕು ಆರೋಗ್ಯ ಕೇಂದ್ರ ಮಧುಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈಗ ತೋರುತ್ತಿರುವ ಅಮಾನತ್ತು ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.5 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು. ಅದಕ್ಕೆ ದಿಃ 25.07.2023 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ.3 ಮತ್ತು 4 ರವರು ಮಣ್ಣರಗುಡ್ಡೆ ಬಳಿ ಕರೆದುಕೊಂಡು ಹೋಗಿ ಆ ಸ್ಥಳದಲ್ಲಿ

ಇದ್ದ ಒಂದು ಗುಡಿಸಲಿನಲ್ಲಿ ಕಳ್ಳತನ ಮಾಡಿದ ವಸ್ತುಗಳನ್ನು ತೋರಿಸಿರುತ್ತಾರೆ. ಆ ಕಳ್ಳತನವಾದ ವಸ್ತುಗಳನ್ನು ಆರೋಪಿಯೇ ಪೊಲೀಸರಿಗೆ ತೋರಿಸಿದರು. ಆ ಗುಡಿಸಲಿನಲ್ಲಿ ಗಣಕಯಂತ್ರಕ್ಕೆ ಸಂಬಂಧಪಟ್ಟ ಎರಡು ಮೌಸ್ ಗಳು, ಒಂದು ಕೀ ಬೋರ್ಡ್, 5 ಪವರ್ ಕೇಬಲ್, ಒಂದು ಬಯೋಮೆಟ್ರಿಕ್ ಯಂತ್ರ ಮತ್ತು 2 ಕಂಪ್ಯೂಟರ್ ಯು.ಪಿ.ಎಸ್. ಗಳು ಇದ್ದು, ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು, ಆ ಸಮಯದಲ್ಲಿ ಒಂದು ಟವಲ್, ಒಂದು ಕಬ್ಬಿಣದ ಇಕ್ಕಳವನ್ನೂ ಸಹ ಅಮಾನತ್ತುಪಡಿಸಿಕೊಂಡರು. ಆ ಸಮಯದಲ್ಲಿ ಒಂದು ಫೋಟೋವನ್ನು ತೆಗೆದರು. ಆ ಫೋಟೋವನ್ನು ನಿಪಿ.6 ಎಂದು ಈಗಾಗಲೇ ಗುರುತಿಸಲಾಗಿದೆ. ಆನಂತರ ಪೊಲೀಸರು ನಮ್ಮನ್ನು ನಮ್ಮ ಕಚೇರಿಯ ಬಳಿ ಕರೆದುಕೊಂಡು ಬಂದರು. ಆಗ ಆರೋಪಿ ತಾನು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದರು.

ಈಗ ತೋರುತ್ತಿರುವ ಆರೋಪಿ ತೋರಿಸಿದ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಆ ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 2.00 ರಿಂದ 3.00 ಗಂಟೆಯವರೆಗೆ ಬರೆಯಲಾಯಿತು. ಆ ಸಮಯದಲ್ಲಿ ನನ್ನ ಜೊತೆ ಚಾಸಾ.4 ರವರು ಇದ್ದರು. ಆ ಸಮಯದಲ್ಲಿ ಒಂದು ಫೋಟೋವನ್ನು ತೆಗೆದರು. ಆ ಫೋಟೋವನ್ನು ನಿಪಿ.8 ಎಂದು ಗುರುತಿಸಲಾಯಿತು. ಆ ದಿನ ಅಮಾನತ್ತುಪಡಿಸಿಕೊಂಡ ಎರಡು ಮೌಸ್ ಗಳು, ಒಂದು ಕೀ ಬೋರ್ಡ್, 5 ಪವರ್ ಕೇಬಲ್, ಒಂದು ಬಯೋಮೆಟ್ರಿಕ್ ಯಂತ್ರ ಮತ್ತು 2

ಕಂಪ್ಯೂಟರ್ ಯು.ಪಿ.ಎಸ್. ಗಳನ್ನು ಮು.ಮಾ.01 ರಿಂದ 11 ಎಂದು ಈಗಾಗಲೇ ಗುರುತಿಸಲಾಗಿದೆ. (ಆದರೆ ಸಿ.ಪಿ.ಯು. ಅನ್ನು ಪಿ.ಎಫ್.ನಲ್ಲಿ ನಮೂದಿಸಿರುವುದಿಲ್ಲ, ಈ ಬಗ್ಗೆ ಆ ಸಿ.ಪಿ.ಯು.ವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ) ಆ ದಿನ ಅಮಾನತ್ತುಪಡಿಸಿಕೊಂಡು ಆ ಟವಲ್ ಮತ್ತು ಕಬ್ಬಿಣದ ಇಕ್ಕಳವನ್ನು ಈಗ ನೋಡುತ್ತಿದ್ದು, ಆ ಟವಲ್ ನ್ನು ಮು.ಮಾ.12 ಎಂದು ಮತ್ತು ಆ ಕಬ್ಬಿಣದ ಇಕ್ಕಳವನ್ನು ಮು.ಮಾ.13 ಎಂದು ಈಗಾಗಲೇ ಗುರುತಿಸಲಾಗಿದೆ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ವಿಡಿಯಾೋ ಕಾನ್ಫರೆನ್ಸ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

**ಪಾಟೀ ಸವಾಲುಃ– ಆರೋಪಿತರ ಪರವಾಗಿಃ ಶ್ರೀ. ಹೆಚ್.ಟಿ.ಟಿ. ವಕೀಲರಿಂದಃ–**

ಆ ದಿನ ನಾನು ಸ್ಥಳ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಆ ಸ್ಥಳ ಪಂಚನಾಮೆಗೆ ನಾನು 2 ನೇ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆ. ಆ ಸ್ಥಳ ಪಂಚನಾಮೆಗೆ ಹೋಗಲು ನಾನು ನಮ್ಮ ಮೇಲಾಧಿಕಾರಿಗಳಿಂದ ಮೌಖಿಕವಾಗಿ ಆದೇಶ ಪಡೆದಿರುತ್ತೇನೆ. ಆ ದಿನ ಪೊಲೀಸರು ನನ್ನನ್ನು ಸ್ಥಳ ಪಂಚನಾಮೆಗೆ ಸಾಕ್ಷಿದಾರರಾಗಿ ಬರುವಂತೆ ಹೇಳಿದರು. ನಾನು ಅಮಾನತ್ತು ಪಂಚನಾಮೆಗೆ ಹೋಗಲು ನಾನು ನಮ್ಮ ಮೇಲಾಧಿಕಾರಿಗಳಿಂದ ಮೌಖಿಕವಾಗಿ ಆದೇಶ ಪಡೆದಿರುತ್ತೇನೆ. ಆ ದಿನ ನಾವು ಮಧ್ಯಾಹ್ನ 12.00 ಗಂಟೆಗೆ ಪೊಲೀಸ್ ಠಾಣೆಯಿಂದ ಹೊರಟೆವು. ಠಾಣೆಯಿಂದ ಆ ಸ್ಥಳ ಸುಮಾರು 1 ಕಿ.ಮೀ. ದೂರದಲ್ಲಿದೆ. ಠಾಣೆಯಿಂದ ಆ ಸ್ಥಳಕ್ಕೆ ಹೋಗಲು 5 ನಿಮಿಷ ಬೇಕಾಗುತ್ತದೆ. ಠಾಣೆಯಿಂದ ನಾವು ಒಟ್ಟು 7 ಜನ ಆ ಸ್ಥಳಕ್ಕೆ ಹೋದೆವು. ಆ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಆ ಮುದ್ದೆ

ಮಾಲುಗಳನ್ನು ಆ ಗುಡಿಸಲಿನ ಯಾವ ಭಾಗದಿಂದ ತಂದರು ಎಂಬುದನ್ನು ಈಗ ನನಗೆ ಹೇಳಲಾಗುವುದಿಲ್ಲ. ಆ ಗುಡಿಸಲಿನ ಸುತ್ತ ಮುತ್ತ ಎಷ್ಟು ಮನೆಗಳಿವೆ ಎಂಬುದು ನನಗೆ ಗೊತ್ತಿಲ್ಲ. ಆ ಅಮಾನತ್ತು ಪಂಚನಾಮೆಯ ಕಾಲಕ್ಕೆ ನಮ್ಮನ್ನು ಹೊರತುಪಡಿಸಿದ ಬೇರೆ ಯಾರೂ ಸಹ ಇರಲಿಲ್ಲ. ಆ ಅಮಾನತ್ತು ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಆ ಪಂಚನಾಮೆಯನ್ನು ಯಾವುದೋ ಒಂದು ಮನೆಯಲ್ಲಿ ಬರೆದರು, ಆದರೆ ಆ ಮನೆಯ ವಿಳಾಸ ನನಗೆ ಗೊತ್ತಿಲ್ಲ. ಅಮಾನತ್ತುಪಡಿಸಿಕೊಂಡ ವಸ್ತುಗಳು ನಮ್ಮ ಕಚೇರಿಗೆ ಸೇರಿದವು ಎಂಬ ಬಗ್ಗೆ ಯಾವುದೇ ವಿಶೇಷವಾದ ಗುರುತನ್ನು ಇಟ್ಟುಕೊಂಡಿರುವುದಿಲ್ಲ. ಈ ಎಲ್ಲಾ ವಸ್ತುಗಳನ್ನು ಸಾಮಾನ್ಯವಾಗಿ ಎಲ್ಲಾ ಕಚೇರಿಗಳಲ್ಲಿ ಮತ್ತು ಶಾಲೆಗಳಲ್ಲಿ ಇರುತ್ತವೆ ಎಂದರೆ ಸರಿ. ಆ ಎಲ್ಲಾ ವಸ್ತುಗಳನ್ನು ಒಂದು ಟವಲ್ ನಲ್ಲಿ ಸುತ್ತಿ ಇಟ್ಟಿದ್ದರು. ಆ ಅಮಾನತ್ತು ಪಂಚನಾಮೆಗೆ ಒಟ್ಟು 4 ಜನ ಸಹಿ ಮಾಡಿದ್ದು, ನಾನು, ಚಾಸಾ.3 ಮತ್ತು 4 ರವರು ಸಹಿ ಮಾಡಿರುತ್ತೇವೆ. ಆ ಅಮಾನತ್ತು ಪಂಚನಾಮೆಯನ್ನು ಯಾವ ಅಧಿಕಾರಿ ಬೆರಳಚ್ಚು ಮಾಡಿದರು ಎಂಬುದು ನನಗೆ ಗೊತ್ತಿಲ್ಲ.

ನಾನು ಆ ಗುಡಿಸಲಿನ ಬಳಿ ಹೋದಾಗ ಆ ಗುಡಿಸಲಿನಲ್ಲಿ ಯಾರು ವಾಸವಾಗಿದ್ದರು ಎಂಬುದು ನನಗೆ ಗೊತ್ತಿಲ್ಲ. ಆ ದಿನ ಆರೋಪಿ ಯಾವುದೇ ಕಳ್ಳತನ ಮಾಡದೇ ಇದ್ದರೂ ಸಹ ನಾನು ನಮ್ಮ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ. ಆರೋಪಿ ಮಧುಗಿರಿಯ ಪುರಸಭೆಯಲ್ಲಿ ಸ್ಕ್ಯಾವೆಂಜರ್ ಆಗಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆ ದಿನ ಪೊಲೀಸರು ಯಾವುದೇ

ವಸ್ತುಗಳನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ, ನಾನು ನಮ್ಮ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ25.07.2023 ರಂದು ಪೊಲೀಸ್ ಇನ್ಸ್‌ಪೆಕ್ಟರ್ ರವರ ಮುಂದೆ ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಆ ದಿನ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ